ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.7018/2022

ಸಿ.ಡಬ್ಲೂಃ2 ಪಿ.ಡಬ್ಲೂಃ2

ಸಾಕ್ಷಿಗೆ ದಿನಾಂಕ ಃ18/08/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ |
| ತಂ/ಗಂ. ಹೆಸರು | ಲಕ್ಷ್ಮಣ ಕಣ್ಣಮುಚಕನಾಳ |
| ವಯಸ್ಸು | 27 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ನಿವಾಳಖೇಡ |

ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ

2 ತಿಂಗಳ ಹಿಂದೆ ನಾನು ದೇವರ ಹಿಪ್ಪರಗಿ ಬಸ್ ನಿಲ್ದಾಣ ಹತ್ತಿರ ನಿಂತಾಗ ಚಾ ಸಾ 4 ರವರು ವಿಜಯಪೂರದಿಂದ ಸಿಂದಗಿ ಕಡೆಗೆ ನಡೆದುಕೊಂಡು ಹೋಗುತ್ತಿದ್ದರು ಆಗ ಒಂದು ಕ್ರೀಟಾ ಬಿಳಿ ಬಣ್ಣದ ಕಾರ ವಿಜಪೂರದಿಂದ ಸಿಂದಗಿ ಕಡೆಗೆ ಹೋಗುತ್ತಿದ್ದಾಗ ದೇವರ ಹಿಪ್ಪರಗಿ ಬಸ್ ನಿಲ್ದಾಣ ಹತ್ತಿರ ಎಡಬದಿಗೆ ಚಾ ಸಾ 4 ರವರ ಹೋಗುವ ಸಮಯದಲ್ಲಿ ಎಡಗಾಲಿಗೆ ಹಾಯ್ದು ಹೋಗಿರುತ್ತದೆ. ಸದರಿ ಅಪಘಾತವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ನಂತರ ನಾನು ಚಾಸಾ 1 ರವರಿಗೆ ಫೋನ್ ಮಾಡಿ ವಿಷಯ ತಿಳಿಸಿರುತ್ತೇನೆ. ನಂತರ ಆ್ಯಂಬುಲೇನ್ಸ ಫೋನ್ ಮಾಡಿ ಚಾಸಾ 4 ರವರಿಗೆ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಅಪಘಾತ ಕಾರ ಚಾಲಕ ತಪ್ಪಿನಿಂದಾಗಿ ಸಂಭವಿಸಿರುತ್ತದೆ. ಸದರಿ ಘಟನೆ ನಡೆಯು ಪೂರ್ವದಲ್ಲಿ ಚಾಸಾ 4 ನಮ್ಮ ಮುಂದೆ ನಿಂತಿದ್ದ ಆತನ ಹಿಂದೆ ನಾನು ನಿಂತಿದ್ದೆ. ಕಾರ ಚಾಲಕ ಪೊನದಲ್ಲಿ ಮಾತನಾಡುತ್ತಾ ಬಂದು ಚಾಸಾ 4 ರವರಿಗೆ ಅಪಘಾತಪಡಿಸಿರುತ್ತಾನೆ.

ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಲಾಗಿ ಸ್ಥಳ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿ ನಿಪಿ. 2 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಅಪಘಾತವಾದ ಮಾರನೇ ದಿನ ಪೋಲಿಸರು ಕರೆಸಿದ್ದರು. ನನ್ನ ಜೊತೆ ಚಾ ಸಾ 1,3 ಹಾಜರಿದ್ದರು. ನಂತರ ಅಲ್ಲಿ ಒಂದು ಭಾವ ಚಿತ್ರ ತೆಗೆದಿರುತ್ತಾರೆ. ಪಂಚನಾಮೆ ಕಾಲಕ್ಕೆ ತೆಗೆದ ಪೊಟೊವನ್ನು ಅದನ್ನುಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದೆ. ನಂತರ ಠಾಣೆಗೆ ಹೋಗಿದ್ದು ಅಲ್ಲಿ ವಾಹನವನ್ನು ಗುರುತಿಸಿದ್ದು ವಾಹನ ಜಪ್ತುಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 4 ಎಂದು ಗುರುತಿಸಲಾಗಿದೆ, ಸಹಿ ನಿಪಿ. 4 ಬಿ ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಶ್ರೀ ಬಿ ಜಿ ಎನ್ ವಕೀಲರಿಂದ

ಈಗ ತೋರಿಸಲಾದ ಭಾವ ಚಿತ್ರ ನಿಪಿ. 3 ಬಸ್ ನಿಲ್ದಾಣದ ಮುಂದೆ ಎಂದರೆ ನಿಜ. ಆ ಸ್ಥಳದಲ್ಲಿ ನಡುಬದಿ ಬಸ್ಸುಗಳು ಬರುತ್ತಿದ್ದು ಮತ್ತು ಅಕ್ಕಪಕ್ಕದಲ್ಲಿಹಕ್ಕು ಹಂಪಲ ಮಾರಾಟ ಮಾಡುವವರು ಇದ್ದು ಜನ

ದಟ್ಟಣೆ ಇರುವುದು ಎಂದರೆ ನಿಜ. ಹಾಗಾಗಿ ಬಸ್ ನಿಲ್ದಾಣ ಹತ್ತಿರ ವೇಗವಾಗಿ ಯಾವುದೇ ವಾಹನ ಬರುವುದಿಲ್ಲ ಎಂದರೆ ನಿಜ. ಘಟನೆಯಾದ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಗುನ್ಹಾ ಸ್ಥಳದ ಪಂಚನಾಮೆ ಉತ್ತರಕ್ಕೆ ವಿಜಯಪೂರ ರಸ್ತೆ, ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ ರಸ್ತೆ ಮತ್ತು ಪಶ್ಚಿಮಕ್ಕೆ ರಸ್ತೆ ಇದೆ. ಚಾ ಸಾ 4 ರವರ ತಪ್ಪಿನಿಂದಾಗಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ